# ಆಕಾಶದೆತ್ತರಕ್ಕೆ:
# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದ ಕೆ.ಎಸ್.ಡಿ.ಸಿ.




■ ಲೇಖಕರು:
**ರಬ್‌ನವಾಜ್ ಎನ್**
**ಕಾರ್ಯನಿರ್ವಾಹಕ ವ್ಯವಸ್ಥಾಪಕರು,**
**ಕೆ.ಎಸ್.ಡಿ.ಸಿ.**


ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು (ಕೆ.ಎಸ್.ಡಿ.ಸಿ.) ಈ ವರ್ಷ 70,000 ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಿ, ಸಾವಿರಾರು ಯುವ ಆಕಾಂಕ್ಷಿತರಿಗೆ ಹಲವಾರು ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಿದೆ. ಅಂತಹ ಸಂಸ್ಥೆಗಳಲ್ಲಿ ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಬಿ.ಐ.ಎ.ಎಲ್.) ಕೂಡ ಒಂದಾಗಿದೆ.

ಶ್ರೀ ಅಶ್ವಿನ್ ಗೌಡ, ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಡಿ.ಸಿ, ಇವರು ಶ್ರೀ ಸಜಿತ್, ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ, ಬಿ.ಐ.ಎ.ಎಲ್., ಹಾಗು ವಿಮಾನ ನಿಲ್ದಾಣದಲ್ಲಿರುವ ಎಚ್.ಎಂ.ಎಸ್.ಹೋಸ್ಟ್, ಸೆಲೆಬಿ, ಸ್ಟಾರ್ ಏರ್ ಮುಂತಾದ 20 ಕಂಪನಿಗಳ ಹಿರಿಯ ಅಧಿಕಾರಿಗಳೊಂದಿಗೆ ಜುಲೈ 2022ರಲ್ಲಿ ಚರ್ಚೆ ನಡೆಸಿದ್ದರು. ಮೊದಲಿಗೆ, ಕೆ.ಎಸ್.ಡಿ.ಸಿ.ಯು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಕೌಶಲ್ಯಭರಿತ ಮಾನವ ಸಂಪನ್ಮೂಲಕ್ಕಾಗಿ ಇರುವ ಬೇಡಿಕೆಗಳನ್ನು ಅರಿಯಲು ಕಂಪನಿಗಳ ಸಮೀಕ್ಷೆ ನಡೆಸುವುದಾಗಿ ತೀರ್ಮಾನಿಸಲಾಯಿತು.

ಈ ಹಿನ್ನಲೆಯಲ್ಲಿ, ಸ್ಪೈಸ್‌ಜೆಟ್, ತಾಜ್‌ಸಾಟ್ಸ್, ಪ್ಲಾಜಾ ಪ್ರೀಮಿಯಂ ಲೌಂಜ್, ಎಲ್.ಎಸ್.ಜಿ. ಸ್ಕೈ ಶೆಫ್ಸ್ ಮುಂತಾದ ಕಂಪನಿಗಳ ಮಾನವ ಸಂಪನ್ಮೂಲ ಅಧಿಕಾರಿಗಳನ್ನು ನಾವು ಸಂದರ್ಶಿಸಿದೆವು.

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾವು ನಡೆಸಿದ 11 ಕಂಪನಿಗಳ ಸಮೀಕ್ಷೆಯಿಂದ ಹೊರಹೊಮ್ಮಿದ ಅಂಶಗಳು:**

1. 6,175 ಉದ್ಯೋಗಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ
2. 12,350 ಅರೆಕಾಲಿಕ, ತಾತ್ಕಾಲಿಕ ಉದ್ಯೋಗಿಗಳಿರುತ್ತಾರೆ.
3. ಮುಖ್ಯವಾಗಿ ನಾಲ್ಕು ವಿಭಾಗಗಳಲ್ಲಿ ಬೇಡಿಕೆಯಿರುವ ಉದ್ಯೋಗಗಳನ್ನು ವಿಂಗಡಿಸಬಹುದಾಗಿದೆ
   - ಲೋಡರ್, ಸಹಾಯಕರು, ಮತ್ತು ಇನ್ನಿತರೆ ಅರೆ-ಕುಶಲ ಕೆಲಸಗಾರರು
   - ಭಾರೀ ಮೋಟರ್ ವಾಹನ ಚಾಲಕರು
   - ಕೋಮಿ ಮತ್ತು ಮಲ್ಟಿ-ಕ್ಯುಸಿನ್ ಶೆಫ್
   - ಕಸ್ಟಮರ್ ಕೇರ್ ಎಕ್ಸಿಕ್ಯುಟಿವ್
4. ಉತ್ತಮ ಸಂವಹನ ಕೌಶಲ್ಯಗಳಿರುವ ಅಭ್ಯರ್ಥಿಗಳಿಗೆ ಕಸ್ಟಮರ್ ಕೇರ್, ಕ್ಯಾಬಿನ್ ಸಿಬ್ಬಂದಿ ನೇಮಕಾತಿಯಲ್ಲಿ ಪ್ರಾಧಾನ್ಯತೆ ನೀಡಲಾಗುತ್ತದೆ.
5. ಎಲ್ಲಾ ಕಂಪನಿಗಳು 2 ವಾರಗಳಿಂದ 3 ತಿಂಗಳವರೆಗೆ ಹೊಸ ಉದ್ಯೋಗಿಗಳಿಗೆ ತರಬೇತಿಯನ್ನು ನೀಡುತ್ತವೆ.



"ನಾನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಉಚಿತವಾಗಿ ಫ್ಲೈಟ್ ಕ್ರ್ಯೂ ಏವಿಯೇಷನ್ ಅಕಾಡೆಮಿಯಲ್ಲಿ ತರಬೇತಿ ಪಡೆದು ಇದೀಗ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ಲೈನ್ ಕಸ್ಟಮರ್ ಸರ್ವಿಸ್ ಎಕ್ಸಿಕ್ಯೂಟಿವ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನಗೆ ಉಚಿತವಾಗಿ ತರಬೇತಿ ನೀಡಿ ಉದ್ಯೋಗ ದೊರಕಲು ಕಾರಣವಾದ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಧನ್ಯವಾದಗಳು."

–ಸ್ವಾತಿ ಎಸ್.
ಕಲಬುರಗಿ ಜಿಲ್ಲೆ

ಸಹಾಯವಾಣಿ –155267 www.kaushalkar.com KSDC

6. ಎಲ್ಲಾ ಕಂಪನಿಗಳು ಕೆ.ಎಸ್.ಡಿ.ಸಿ.ಯಿಂದ ತರಬೇತಿ ಪಡೆದ ನುರಿತ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಆಸಕ್ತಿ ವ್ಯಕ್ತಪಡಿಸಿವೆ.

ಸಮೀಕ್ಷೆಯ ನಂತರ, ಏರ್ ಇಂಡಿಯಾ ಸಾಟ್ಸ್ ಕಂಪನಿಗೆ ಅಭ್ಯರ್ಥಿಗಳ ನೇಮಕಾತಿಯನ್ನು ಕೆ.ಎಸ್.ಡಿ.ಸಿ.ಯು ಬೆಂಬಲಿಸುತ್ತಿದೆ. ಕಂಪನಿಯ ಮಾನವ ಸಂಪನ್ಮೂಲ ತಂಡವು ಕಲಬುರಗಿಗೆ ತೆರಳಿ ಆಕಾಂಕ್ಷಿಗಳ ಸಂದರ್ಶನ ನಡೆಸಿ 30 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ. ಕೆ.ಎಸ್.ಡಿ.ಸಿ.ಯಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ಒಂದಾದ ಮೆರಿಟ್ಯೂಡ್ ಡುಫ್ರಿಯಂತಹ ಬಿ.ಐ.ಎ.ಎಲ್.ನಲ್ಲಿರುವ ಕಂಪನಿಗಳಿಗೆ ವರ್ಚುವಲ್ ನೇಮಕಾತಿ ಡ್ರೈವ್‌ಗಳನ್ನು ನಡೆಸಿದೆ.

ಹಾಗೆಯೇ, ಮತ್ತೊಂದು ತರಬೇತಿ ಸಂಸ್ಥೆಯಾದ ಫ್ಲೈಟ್ ಕ್ರ್ಯೂ ಏವಿಯೇಷನ್ ಅಕಾಡೆಮಿಯು ಯುವ ಆಕಾಂಕ್ಷಿಗಳಿಗೆ ತರಬೇತಿ ನೀಡಿ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವಲ್ಲಿ ಬೆಂಬಲಿಸಿದೆ. ಟೆಕ್‌ಶೂರ್ ಮ್ಯಾನೇಜ್‌ಮೆಂಟ್ ಎಂಬ ಮತ್ತೊಂದು ಸಂಸ್ಥೆಯಿಂದ ತರಬೇತಿ ಪಡೆದ ಅಭ್ಯರ್ಥಿಗಳು ಏರ್‌ಪೋರ್ಟ್ ಭದ್ರತಾ ಎಕ್ಸ್–ರೇ ಸ್ಕ್ರೀನಿಂಗ್ ತಂತ್ರಜ್ಞರಾಗಿ ಕೆಲಸಕ್ಕೆ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿರುವ ಯಶೋಗಾಥೆಯು ಇತರೆ ಅಭ್ಯರ್ಥಿಗಳಿಗೆ ಮಾದರಿಯಾಗಿದೆ.

ಕೆ.ಎಸ್.ಡಿ.ಸಿ.ಯ ಕೈಗಾರಿಕಾ ಸಂಪರ್ಕ ಕೋಶ / ಇಂಡಸ್ಟ್ರಿ ಲಿಂಕೇಜ್ ಸೆಲ್‌ನಡಿಯಲ್ಲಿ ಮೆನ್ಜೀಜ್ ಏವಿಯೇಷನ್ ಬೊಬ್ಬ (ಬೆಂಗಳೂರು) ಪ್ರೈ.ಲಿ. ಕಂಪನಿಯು ತರಬೇತಿ ಸಂಸ್ಥೆಯಾಗಿ ಮಾನ್ಯತೆ ಪಡೆದಿದೆ.

ಕೆ.ಎಸ್.ಡಿ.ಸಿ.ಯು ಹೀಗೆ ಅನೇಕ ಯುವಜನರ ಆಕಾಂಕ್ಷೆಗಳಿಗೆ ರೆಕ್ಕೆಗಳನ್ನು ನೀಡಿದೆ. ವಿಶೇಷವಾಗಿ ಗ್ರಾಮೀಣ ಯುವಜನತೆಗೆ ವಿಮಾನ ನಿಲ್ದಾಣದಲ್ಲಿ ಉದ್ಯೋಗ ಕಲ್ಪಿಸಿ, ಬಿ.ಐ.ಎ.ಎಲ್. ನಂತಹ ಪ್ರತಿಷ್ಠಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕರ್ನಾಟಕದ ಯುವಜನತೆಯ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಕ್ಕಾಗಿ ನೂತನ ಕಾರ್ಯಕ್ರಮಗಳನ್ನು ಪರಿಚಯಿಸುತ್ತಿದೆ.

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆಎಸ್‌ಡಿಸಿ)**

080-29555 085
www.kaushalkar.com

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

# Flying High:

## *KSDC Supports Candidates for Placement at the Bengaluru International Airport*




■ Author:
**Rubnawas N**
**Executive Manager, Karnataka Skill Development Corporation**


The Karnataka Skill Development Corporation (KSDC) provided skill training to more than 70,000 candidates this year and supported placements of the trained youth in several well-known organizations. One such organization that has been associated with KSDC for skill development and employment is the Bengaluru International Airport Limited (BIAL).

Mr Ashwin Gowda, Managing Director, KSDC met with Mr Sajit, Chief Human Resource Officer, BIAL and senior executives from 20 companies at BIAL such as HMSHost, Celebi and Star Air in July 2022 to initiate a fruitful collaboration. The outcome of this discussion was that KSDC will undertake an assessment of the skilled workforce requirements of the many companies housed at the Bengaluru International Airport.

At the airport, we interviewed the Human Resource (HR) executives from key companies such as SpiceJet, Tajsats, Plaza Premium Lounge, and LSG Sky Chefs, among others.

**The following insights emerged from this survey:**

- 6,175 is the number of regular or on-roll employees currently working in the 11 companies surveyed
- 12,350 is the number of employees currently working in the organisation on contract or part-time or temporary basis
- Majorly four job role categories are in-demand:
  - Loaders, helpers, assistants, and other unskilled and semi-skilled workers
  - Heavy motor vehicle drivers
  - Commis and multi-cuisine chefs
  - Customer care executives
- Good communication and interpersonal skills are the essential requisites set by the recruiters for the jobs warranting skilled workers such as customer care executives, cabin crew etc.
- All companies provide in-person training of varying duration ranging from 2



"ನಾನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಉಚಿತವಾಗಿ ಫ್ಲೈಟ್ ಕ್ರ್ಯೂ ಏವಿಯೇಷನ್ ಅಕಾಡೆಮಿಯಲ್ಲಿ ತರಬೇತಿ ಪಡೆದು ಇದೀಗ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ಲೈನ್ ಕಸ್ಟಮರ್ ಸರ್ವಿಸ್ ಎಕ್ಸಿಕ್ಯೂಟಿವ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನಗೆ ಉಚಿತವಾಗಿ ತರಬೇತಿ ನೀಡಿ ಉದ್ಯೋಗ ದೊರಕಲು ಕಾರಣವಾದ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಧನ್ಯವಾದಗಳು."

–ಶ್ವೇತ ಎಸ್.
ಕಲಬುರಗಿ ಜಿಲ್ಲೆ

ಸಹಾಯವಾಣಿ –155267 www.kaushalkar.com KSDC

weeks to 3 months including on-the-job training

- All companies responded that they would be interested in hiring the candidates skilled by KSDC

Following the survey, KSDC facilitated the recruitment of candidates for Air India Sats. The HR team interviewed aspirants from Kalaburagi and recruited more than 30 candidates. Similarly, one of KSDC's long-standing training partners Meritude was onboarded to conduct virtual recruitment drives for companies at BIAL such as Dufry.

Flight Crew Aviation Academy, one of our accredited training partners in the Aviation sector, has trained and placed many young aspirants at the Bengaluru International Airport. Another partner of ours, TechSure Management has also trained and placed youth at the airport for the job role of Airport Security X-Ray Screening Technician.

Under KSDC's Industry Linkage Cell initiative, Menzies Aviation Bobba (Bangalore) Pvt. Ltd., one of the largest cargo operators, empanelled with KSDC as a training partner.

KSDC has thus given wings to the aspirations of many youth, especially from the rural pockets of Karnataka, for jobs at the airport and continues its association with BIAL and the companies at the Bengaluru International Airport for skill development and placement.

**Karnataka Skill Development Corporation (KSDC)**
080-29555 085
www.kaushalkar.com

scan QR code for more info